ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸುವುದು

ಶ್ರೀ ರಾಜು ಕೆ. (ರಾಮನಗರ):–

53 (634) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ತಮಿಳುನಾಡು ಗಡಿಯಿಂದ ಕನಕಪುರ–ರಾಮನಗರ–ಮಾಗಡಿ ಮುಖಾಂತರ ದಾಬಸ್‌ಪೇಟೆ ಸೇರುವ ರಾಜ್ಯ ಹೆದ್ದಾರಿ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಆ) ಹಾಗಿದ್ದಲ್ಲಿ, ಯಾವಾಗ ಮೇಲ್ದರ್ಜೆಗೇರಿಸಲಾಗುವುದು? (ಮಾಹಿತಿ ನೀಡುವುದು)

ಶ್ರೀ ಸಿ. ಎಂ. ಉದಾಸಿ (ಮಾನ್ಯ ಲೋಕೋಪಯೋಗಿ ಸಚಿವರು):–

(ಅ) ರಾಜ್ಯ ಹೆದ್ದಾರಿ 3, ತಮಿಳುನಾಡು ಗಡಿಯಿಂದ ಹುಣಸೇನಹಳ್ಳಿ ಕನಕಪುರ–ರಾಮನಗರ–ಮಾಗಡಿ–ಸೋಲೂರು–ಸೋಮಪುರ–ಕೊರಟಗೆರೆ–ಮಧುಗಿರಿ–ಪಾವಗಡ ಮೂಲಕ ಚಿಕ್ಕಹಳ್ಳಿ ಸೇರುತ್ತದೆ.

ಕೇಂದ್ರ ಭೂಸಾರಿಗೆ ಮಂತ್ರಾಲಯಕ್ಕೆ ದಾಬಸ್‌ಪೇಟೆಯಿಂದ ಸೋಲೂರು–ಮಾಗಡಿ–ರಾಮನಗರ–ಕನಕಪುರ–ಆನೇಕಲ್–ಅತ್ತಿಬೆಲೆ ಹಾಗೂ ಸರ್ಜಾಪುರ ಸೇರುವ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಪ್ರಸ್ತಾವಿತ ರಸ್ತೆಯ ಒಟ್ಟು ಉದ್ದ 194.00 ಕಿ.ಮೀ. ಈ ಪ್ರಸ್ತಾವನೆಗೆ ಕೇಂದ್ರ ಭೂಸಾರಿಗೆ ಮಂತ್ರಾಲಯದಿಂದ ಇದುವರೆಗೂ ಅನುಮೋದನೆ ದೊರಸಿರುವುದಿಲ್ಲ.

ಕೇಂದ್ರ ಭೂಸಾರಿಗೆ ಮಂತ್ರಾಲಯಕ್ಕೆ ಈಗಾಗಲೇ ಸಲಿಸಿರುವ ಪ್ರಸ್ತಾವೆನೆಯಲ್ಲಿ ಕನಕಪುರ–ರಾಮನಗರ–ಮಾಗಡಿ ಮುಖಾಂತರ ದಾಬಸ್ ಪೇಟೆ ಸೇರುವ ರಾಜ್ಯ ಹೆದ್ದಾರಿ ರಸ್ತೆಯು ಒಂದು ಭಾಗವಾಗಿರುತ್ತದೆ. ಇದನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸಲು ಕೋರಲಾಗಿದೆ. ತಮಿಳುನಾಡು ಗಡಿಯ ಭಾಗದಲಿರುವ ಹುಣಸೇಹಳ್ಳಿಯಿಂದ ಕನಕಪುರದ ವರೆಗಿನ ಭಾಗದ ರಸ್ತೆಯು ಈ ಪ್ರಸ್ತಾವನೆಯಲ್ಲಿ ಸೇರ್ಪಡೆಯಾಗಿರುವುದಿಲ್ಲ.

ಆ) ಕೇಂದ್ರ ಭೂಸಾರಿಗೆ ಮಂತ್ರಾಲಯಕ್ಕೆ ಸಲ್ಲಿಸಿರುವ ಪ್ರಸ್ತಾವನೆಗೆ ಅನುಮೋದನೆ ದೊರಕಿದ ನಂತರ ಮೇಲ್ದರ್ಜೆಗೇರಿಸುವ ಪ್ರಕ್ರಿಯೆಯನ್ನು ಕೈಗೊಳ್ಳಲಾಗುವುದು.

ಶ್ರೀ ರಾಜು ಕೆ.: ಮಾನ್ಯ ಉಪಾಧ್ಯಕ್ಷರೆ, ರಾಮನಗರ ಮತ್ತು ಕನಕಪುರ ರಸ್ತೆಯ ಕರ್ನಾಟಕ, ತಮಿಳುನಾಡು ಹಾಗೂ ಆಂಧ್ರ ಈ ಮೂರು ರಾಜ್ಯಗಳ ಸಂಪರ್ಕ ರಸ್ತೆ ಆಗಿದ್ದು, ಇದುವರೆಗೂ ಕೂಡ ಅದನ್ನು ಅಭಿವೃದ್ಧಿಪಡಿಸಿಲ್ಲ. ರಾಮನಗರ ಕನಕಪುರ ತಾಲ್ಲೂಕಿನ ರಸ್ತೆ ಬಿಟ್ಟರೆ ಉಳಿದ ಕಡೆ ಇವತ್ತಿಗೂ ಕೂಡ 3.7 ಮೀಟರ್ ರಸ್ತೆ ಇದೆ. ಇದು SH-3 ಅಂದರೆ ಬಹಳ ಹಳೆಯ ರಸ್ತೆ ಆದರೂ ಇದರ ಅಭಿವೃದ್ಧಿ ಮಾಡುವುದಕ್ಕೆ ಸರ್ಕಾರ ಇವತ್ತಿನವರೆಗೂ ಪ್ರಯತ್ನ ಮಾಡಿಲ್ಲ. ನಾವು ಈಗಾಗಲೇ ಎರಡು ಸಾರಿ ಮನವಿ ಕೊಟ್ಟಿದ್ದೇವೆ. ರಾಷ್ಟ್ರೀಯ ಹೆದ್ದಾರಿಯನ್ನು ಸೇರಿಸುತ್ತೇವೆಂದು ಹೇಳಿದರೂ ಕೂಡ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸುತ್ತೇವೆಂದು ಹೇಳಿದ್ದಾರೆ. ಆದರೆ ಇದುವರೆಗೆ ಪ್ರಸ್ತಾವನೆ ಕಳುಹಿಸಿಲ್ಲ. ಆ ರಸ್ತೆ ದುರಸ್ತಿ ಮಾಡುವುದಕ್ಕೆ ಕೂಡ ಸರ್ಕಾರ ಇದುವರೆಗೂ ಹಣ ಬಿಡುಗಡೆ ಮಾಡಲಲ್ಲ. ನಾವು ಲೋಕೋಪಯೋಗಿ ಸಚಿವರಿಗೆ ಸಾಕಷ್ಟು ಸಾರಿ ಮನವಿ ಮಾಡಿದ್ದೇವೆ. ಒಂದು ಸಾರಿ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಬೇಕು. ಒಂದು ದಿವಸಕ್ಕೆ 4650 ವಾಹನಗಳು ಅಲ್ಲಿ ಸಂಚಾರ ಮಾಡುತ್ತವೆ. ಜೊತೆಗೆ ಕನಕಪುರದಲಿ ಕಲ್ಲು ಗಣಿ ಏನು ನಡೆಯುತ್ತಿದೆ, ಕಲ್ಲು ಗಣಿ ಲಾರಿಗಳು 40 ರಿಂದ 50 ಟನ್ ಭಾರವನ್ನು ಹಾಕಿ ಓಡಾಡುತ್ತಿವೆ. ಇದರಿಂದ ರಸ್ತೆಗಳು ಹಾಳಾಗಿವೆ. ಆದ್ದರಿಂದ ಆದಷ್ಟು ಬೇಗ ಆ ರಸ್ತೆಯ ಅಭಿವೃದ್ಧಿ ಕೆಲಸವನ್ನು ಮಾಡಬೇಕು. ಈ ರಸ್ತೆ PPP ಪ್ರಾಜೆಕ್ಟ್‌ನಲ್ಲಿ ಕೂಡ ಸೇರಿತ್ತು. ಅದನ್ನೂ ಕೂಡ ಕೈ ಬಿಟ್ಟಿದ್ದಾರೆ. ಇದು ಯಾವುದೂ ಆಗದೇ ಇರುವುದರಿಂದ ದಯಮಾಡಿ ರಸ್ತೆಯನ್ನು ಅಗಲೀಕರಣ ಮಾಡುವುದು ಮತ್ತು ಇರುವ ಸಾಮರ್ಥ್ಯವನ್ನು ಜಾಸ್ತಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಸುಮಾರು 4560 ವಾಹನಗಳು ಓಡಾಡಿದರೂ ಕೂಡ ಆ ರಸ್ತೆ ದುರಸ್ತಿ ಮಾಡುವುದಕ್ಕೆ ಇನ್ನೂ ಪ್ರಯತ್ನ ಮಾಡಿಲ್ಲ. ದಯಮಾಡಿ ಅದನ್ನು ಆದಷ್ಟು ಬೇಗ ಮಾಡಿಕೊಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಸಿ. ಎಂ. ಉದಾಸಿ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ತಮಿಳುನಾಡು ಗಡಿಯಿಂದ ಕನಕಪುರ, ರಾಮನಗರ ಹಾಗೂ ಮಾಗಡಿ ಮುಖಾಂತರ ದಾಬಸ್‌ಪೇಟೆ ಸೇರುವ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಪರಿವರ್ತನೆ ಮಾಡುವ ಸಲುವಾಗಿ ಕೇಳಿರುವಂತಹ ಪ್ರಶ್ನೆ ಇದು. ಈ ಪ್ರಶ್ನೆಗೆ ನಾನು ಉತ್ತರ ಕೊಡುವಂತಹ ಸಂದರ್ಭದಲ್ಲಿ ಬೇರೆ ಬೇರೆ ರಸ್ತೆಗಳ ಸುಧಾರಣೆ ಮಾಡುವ ವಿಚಾರವನ್ನು ಅವರು ಕೇಳುತ್ತಿದ್ದಾರೆ. ಈ ಮಧ್ಯದಲ್ಲಿ ದಾಬಸ್ ಪೇಟೆ ಮತ್ತು ಮಾಗಡಿಯಲ್ಲಿ ಬರುವಂತಹ ರಸ್ತೆ ಏನಿದೆ, ADB ಯಿಂದ 68 ಕಿ.ಮಿ. ರಸ್ತೆಗೆ 116 ಕೋಟಿಗೆ ಕೆಶಿಪ್‌ನಲ್ಲಿ ಟೆಂಡರ್ ಆಗಿದೆ.

ಉಳಿದ ರಸ್ತೆಗಳ ಬಗ್ಗೆ ಅವರು ನನ್ನ ಗಮನಕ್ಕೆ ತಂದಿರುವಂತಹ ವಿಚಾರದಲ್ಲಿ ಅಭಿವೃದ್ಧಿ ಮಾಡುವ ಕೆಲಸವನ್ನು ಮಾಡುತ್ತೇನೆಂದು ಹೇಳುವುದಕ್ಕೆ ಬಯಸುತ್ತೇನೆ. ಈಗ ಅವರು ಹುಣಸೇಹಳ್ಳಿಯಿಂದ ಕನಕಪುರದವರೆಗಿನ ರಸ್ತೆಯನ್ನು ಪ್ರಸ್ತಾವನೆಯಲ್ಲಿ ಸೇರಿಸಬೇಕಾಗಿತ್ತು ಎನ್ನುವಂತಹ ಭಾವನೆ ಅವರದು ಇದೆ. ಆದರೆ ನಮಗೆ ಇದನ್ನು ಕನಕಪುರದಿಂದ via ಸರ್ಜಾಪುರ ಆನೇಕಲ್ ಹೊಸೂರು ಮಾರ್ಗವಾಗಿ ಇರುವಂತಹ ರಸ್ತೆ industrially ಅದು ಬೇಕಾಗಿರುವಂತಹ ವ್ಯವಸ್ಥೆ ಇರುವಂಥದ್ದು. ಅಲ್ಲಿ ವಾಹನ ಸಂಚಾರದ ದಟ್ಟಣೆ ಇರುವುದರಿಂದ ಆ ರಸ್ತೆಯನ್ನು ಸೇರಿಸಿ ಆಗಿದೆ. ಹುಣಸೇಹಳ್ಳಿವರೆಗಿನ ರಸ್ತೆಯನ್ನು ಸೇರಿಸಬೇಕೆಂಬ ಬೇಡಿಕೆ ಇಟ್ಟುಕೊಂಡಿದ್ದರು. ಅದು ತಮಿಳುನಾಡಿನ ಬಾರ್ಡರ್ ವರೆಗೆ ಹೋದರೆ ಮುಂದೆ ಅದಕ್ಕೆ ರಾಷ್ಟ್ರೀಯ ಹೆದ್ದಾರಿ ಇಲ್ಲದೇ ಇರುವುದರಿಂದ ಈ ರೀತಿ ಪ್ರಸ್ತಾವನೆ ಮಾಡಿದ್ದೇವೆ. ಪ್ರಸ್ತಾವನೆ ಕಳುಹಿಸಿಲ್ಲವೆಂದು ಅವರು ಹೇಳುತ್ತಿದ್ದಾರೆ, ನನ್ ಬಳಿ ಮಾಹಿತಿ ಇದೆ ಅವರಿಗೆ ಬೇಕಾದರೆ ಮಾಹಿತಿ ಕೊಡುತ್ತೇನೆ. ಕೇಂದ್ರ ಸರ್ಕಾರಕ್ಕೆ ನಾವು ಈಗಾಗಲೇ ಈ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಪರಿವರ್ತಿಸುವ ಬೇಡಿಕೆ Sl. No. 2ರಲ್ಲಿ ಇದೆ. ನಾವು ಆದ್ಯತೆ ಕೊಟ್ಟಿರುವುದನ್ನು ಅವರ ಗಮನಕ್ಕೆ ತರುವುದಕ್ಕಾಗಿ ಆ ನೋಟಿಫಿಕೇಷನ್ ಕಾಪಿ ಅವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ರಾಜು ಕೆ.: ಪ್ರಸ್ತಾವನೆ ಕಳುಹಿಸಿಲ್ಲ ಎಂಬ ವಿಷಯ ನಾನು ಪ್ರಸ್ತಾಪ ಮಾಡಲಿಲ್ಲ. ಅದರ ಸಾಮರ್ಥ್ಯ ಜಾಸ್ತಿ ಮಾಡಬೇಕು. 3.7 ಕಿ.ಮೀ. ರಸ್ತೆ ಇವತ್ತಿಗೂ ಕೂಡ ಹಳೆಯ ರಸ್ತೆಯಾಗಿದೆ. SH-3 ನಂಬರ್ ಅದು. ಅಷ್ಟು ಹಳೆಯ ರಸ್ತೆಯನ್ನು ಅಭಿವೃದ್ಧಿ ಮಾಡಿಲ್ಲ, ಅದರ ಜೊತೆಯಲ್ಲಿ ರಾಷ್ಟ್ರೀಯ ಹೆದ್ದಾರಿ ಮಾಡುವುದಕ್ಕೆ ತೊಂದರೆ ಏನೆಂದು ಕೇಳಿದ್ದೇನೆ. ಕಳುಹಿಸಿದ್ದರೆ ಸಂತೋಷ ಪಡೋಣ. ಆದರೆ ನಾನು ಕೇಳುತ್ತಿರುವುದು ಸಾಮರ್ಥ್ಯ ಜಾಸ್ತಿ ಮಾಡಬೇಕು. ಜೊತೆಗೆ 4560 ವಾಹನಗಳ ಸಂಚಾರ ದಟ್ಟಣೆ ಇರುವುದರಿಂದ ಅದನ್ನು ಅಭಿವೃದ್ಧಿ ಮಾಡುವುದಕ್ಕೆ ಹಾಗೂ ಅದರ ಅಗಲೀಕರಣ ಮಾಡುವುದಕ್ಕೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ಎಂದು ಕೇಳಿದ್ದೇನೆ.

ಶ್ರೀ ಹೆಚ್. ಸಿ. ಬಾಲಕೃಷ್ಣ: ಮಾನ್ಯ ಉಪಾಧ್ಯಕ್ಷರೆ, ಮಾಗಡಿಯಿಂದ ಕೊರಟಗೆರೆವರೆಗೆ ಕೆಶಿಪ್ ಅಡಿಯಲ್ಲಿ ರಸ್ತೆಯನ್ನು ಅಭಿವೃದ್ಧಿ ಪಡಿಸುತ್ತಿದ್ದಾರೆ. ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದು ಇಷ್ಟೆ. ರಾಮನಗರ ನಮ್ಮ ಜಿಲ್ಲಾ ಹೆಡ್‌ಕ್ವಾರ್ಟರ್ಸ್ ಆಗಿರುವುದರಿಂದ ದಯಮಾಡಿ ಕನಕಪುರದಿಂದ ಮಾಗಡಿಯವರೆಗೆ ಲಿಂಕ್ ರಸ್ತೆಯನ್ನು ಕೆಶಿಪ್‌ನ 2ನೇ ಫೇಸ್‌ನಲ್ಲಿ ನೀವೇನು ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೀರಿ ಅದರಲ್ಲಿ

ತೆಗೆದುಕೊಳ್ಳುತ್ತೀರೋ ಇಲ್ಲವೋ ಹೇಳಬೇಕು. ತೆಗೆದುಕೊಳ್ಳಬೇಕೆಂದು ನಾವು ನಿಮಗೆ ಒತ್ತಾಯ ಮಾಡುತ್ತೇವೆ.

ಶ್ರೀ ಎಂ. ಪಿ. ಕುಮಾರಸ್ವಾಮಿ: ಮಾನ್ಯ ಉಪಾಧ್ಯಕ್ಷರೆ, ಸ್ಟೇಟ್ ಹೈವೆಗಳ ಪಟ್ಟಿ ನಾವಾಗಿ ಶಾಸಕರು ಪಟ್ಟಿ ಕೊಟ್ಟರೂ ಕೆಲವು ಸಂದರ್ಭಗಳಲ್ಲಿ ಆಗುತ್ತಿಲ್ಲ. ದಯವಿಟ್ಟು ಸರ್ಕಾರವೇ ವಾಲಂಟರಿಯಾಗಿ **state highway** ಗಳನ್ನು ಗುಂಡಿ ಮುಚ್ಚುವುದೋ ಅಥವಾ ಗ್ರ್ಯಾಂಟ್ ಕೊಡುವುದೋ ಮಾಡಲಿ. ದೊಡ್ಡ ಪ್ರಮಾಣದ ಅಮೌಂಟ್ ಕೇಳಿದರೂ ಕೂಡ ನಮಗೆ 3–4 ವರ್ಷಗಳಿಂದ ಬರುತ್ತಿಲ್ಲ. ರಾಜ್ಯ ಹೆದ್ದಾರಿಗಳ ಗುಂಡಿ ಮುಚ್ಚುವುದಕ್ಕೆ ಕೇವಲ ರೂ. 20,000 ಕೊಡುತ್ತೀರಿ, ಅದು ಸಾಲುತ್ತಿಲ್ಲ. ನಮ್ಮದು ಅತಿ ವೃಷ್ಟಿ ಪ್ರದೇಶ. ದೊಡ್ಡ ದೊಡ್ಡ ಗುಂಡಿ ಇದೆ. ದಯಮಾಡಿ ಆ ಬಗ್ಗೆ ರಾಜ್ಯ ಹೆದ್ದಾರಿಗಳನ್ನು ರಾಜ್ಯ ಸರ್ಕಾರವೇ ವಾಲಂಟರಿಯಾಗಿ ನೋಡಿಕೊಳ್ಳಬೇಕು. ರಾಷ್ಟ್ರೀಯ ಹೆದ್ದಾರಿಗಳನ್ನು ಕೇಂದ್ರ ಸರ್ಕಾರ ವಹಿಸಿಕೊಳ್ಳುತ್ತದೆ. ಅದೇ ರೀತಿ ರಾಜ್ಯ ಹೆದ್ದಾರಿಗಳನ್ನು ವಹಿಸಿಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಬಹಳ ತೊಂದರೆಯಾಗುತ್ತದೆ. ಈ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಎಂ. ಟಿ. ಕೃಷ್ಣಪ್ಪ: ಮಾನ್ಯ ಉಪಾಧ್ಯಕ್ಷರೆ, ಕಳೆದ ಬಾರಿ ಅಧಿವೇಶನದಲ್ಲಿ ಮಾನ್ಯ ಸಚಿವರು ರಸ್ತೆ ಗುಂಡಿ ಮುಚ್ಚಿ ಕೊಡತ್ತೇವೆಂದು ಭರವಸೆ ಕೊಟ್ಟಿದ್ದರು. ಇವತ್ತಿನವರೆಗೆ ಗುಂಡಿ ಮುಚ್ಚಿಲ್ಲ ಆದ್ದರಿಂದ ಓಡಾಡುವುದಕ್ಕಾಗುತ್ತಿಲ್ಲ. ಕಳೆದ ಬಾರಿ ಮಳೆ ಆಗಿ **accident** ಆಗಿ ಸುಮಾರು 7–8 ಜನ ಸತ್ತು ಹೋಗಿರುವ ವಿಷಯವನ್ನು ಈ ಸದನದ ಗಮನಕ್ಕೆ ತಂದಿದ್ದೇವೆ. ತಾವು ಕೂಡ ಅಶ್ಯೂರ್ ಮಾಡಿದ್ದೀರಿ. ಬಹಳಷ್ಟು ರಸ್ತೆಗಳು ಹಾಳಾಗಿವೆ. ವಿಶೇಷವಾಗಿ ನಮ್ಮ ತುರುವೇಕರೆ ಕ್ಷೇತ್ರದಲ್ಲಿ ದಯಮಾಡಿ ಹೆಚ್ಚಿನ ಆದ್ಯತೆಯನ್ನು ಕೊಡುವುದಕ್ಕಾಗುತ್ತಾ ನೋಡಿ. ವಿರೋಧ ಪಕ್ಷದ ಶಾಸಕರು ಎಂದು ಗಮನದಲ್ಲಿಟ್ಟುಕೊಳ್ಳಬೇಡಿ. ಅಲ್ಲಿ ಕೂಡ ಜನ ಓಡಾಡುತ್ತಾರೆ. ದಯಮಾಡಿ ಇದರ ಬಗ್ಗೆ ಚಿಂತನೆ ಮಾಡಿ.

ಶ್ರೀ ವೈ. ಎನ್. ರುದ್ರೇಶ್‌ಗೌಡ: ಮಾನ್ಯ ಉಪಾಧ್ಯಕ್ಷರೆ, ತಾವು ಗಮನಿಸಬೇಕು. ನಮ್ಮ 30 ವರ್ಷಗಳ ರಾಜಕೀಯ ಜೀವನದಲ್ಲಿ ನಾವು ಕಂಡಿರುವುದು ಏನೆಂದರೆ, ಗುಂಡಿ ಮುಚ್ಚದೆ ಇರುವ ವರ್ಷ ಎಂದರೆ ಇದೇ ಪ್ರಥಮ ವರ್ಷ. ಇಷ್ಟು ವರ್ಷಗಳಿಂದ ನಾವು ನೋಡುತ್ತಿದ್ದೇವೆ ಡಿಸೆಂಬರ್, ಜನವರಿ ಹಾಗೂ ಫೆಬ್ರವರಿ ತಿಂಗಳುಗಳಲ್ಲಿ ಮೇಜರ್ ಡಿಸ್ಟ್ರಿಕ್ಟ್ ರೋಡ್ಸ್, ರಾಜ್ಯ ಹೆದ್ದಾರಿಗಳಲ್ಲಿ ಗುಂಡಿ ಮುಚ್ಚುವರು. ಆದರೆ ಈ ವರ್ಷ

2011–12ನೇ ಸಾಲಿನಲ್ಲಿ ನಾವು ನೋಡುತ್ತಿದ್ದೇವೆ. ಡಿಸೆಂಬರ್ ಇಲ್ಲ, ಜನವರಿ ಇಲ್ಲ, ಫೆಬ್ರವರಿ ಇಲ್ಲ ಇಲ್ಲಿಯವರೆಗೂ ಏನೂ ಇಲ್ಲ ಹೀಗಾಗಿ ಎನಾಗಿದೆಯೆಂದರೆ major district roads ಮತ್ತು State highway ಗಳಲ್ಲಿ ಎಲ್ಲಿ ಹೋದರೂ ಗುಂಡಿಗಳೇ ಕಾಣಿಸಿಗುತ್ತದೆ. ಶಾಸಕರಿಗೆ ಪ್ರತಿ ದಿವಸ ಹಳ್ಳಿ ಜನ ಪ್ರಶ್ನೆ ಮಾಡುತ್ತಾರೆ. ಈ ರಸ್ತೆಗಳು ಹೀಗಿವೆ. ಶಾಸಕರ ಅನುದಾನದಲ್ಲಿಯಾದರೂ ಮಾಡಿ ಕೊಡಿ ಗುಂಡಿಗಳನ್ನು ಮುಚ್ಚಿಕೊಡಿ ಎಂದು ಕೇಳುತ್ತಾರೆ. ಸನ್ಮಾನ್ಯ ಲೋಕೋಪಯೋಗಿ ಮಂತ್ರಿಗಳಲ್ಲಿ ಮನವಿ ಮಾಡುವುದೇನೆಂದರೆ, ನೀವು ಎಲ್ಲಿಂದಲಾದರೂ ಹಣವನ್ನು ತಂದು Major district roads & state highway ಗಳ ಗುಂಡಿಗಳನ್ನು ಮುಚ್ಚುವಂಥ ವ್ಯವಸ್ಥೆ ಮಾಡಿಸಿ ಎಂದು ಮನವಿ ಮಾಡುತ್ತೇನೆ.

ಶ್ರೀ ಪಿ. ಎಂ. ನರೇಂದ್ರಸ್ವಾಮಿ: (ಮಳವಳ್ಳಿ): ಸನ್ಮಾನ್ಯ ಉಪಾಧ್ಯಕ್ಷರೆ, ರಾಮನಗರ ಶಾಸಕರಾದ ಶ್ರೀ ರಾಜುರವರು ಹೆಚ್ಚಿನ ವಾಹನಗಳ ಸಂಚಾರಕ್ಕೆ ಸಾಮರ್ಥ್ಯ ಹೊಂದುವ ರೀತಿಯಲ್ಲಿ ಗುಣಮಟ್ಟದ ರಸ್ತೆಯನ್ನು ಮಾಡುವುದಕ್ಕೆ ಕೇಳುತ್ತಿದ್ದಾರೆ. ಆದರೆ, ಇತ್ತೀಚೆಗೆ ಇಲಾಖೆಯಿಂದ ಹೊರಬಿದ್ದಿರುವ ಟೆಂಡರ್ ಪ್ರಕ್ರಿಯೆಯಲ್ಲಿ 2000 ಕಿ.ಮೀ. ರಸ್ತೆಗಳನ್ನು ಹೆಚ್ಚುವರಿಯಾಗಿ ಅಭಿವೃದ್ಧಿ ಪಡಿಸುವುದಕ್ಕೆ ಇಲಾಖೆ ಕಾರ್ಯಕ್ರಮ ಹಮ್ಮಿಕೊಂಡಿದೆ. ಇದರಲ್ಲಿ ಒಂದು ಲೋಪ ಇದೆ. ಮೊದಲು 1 ಕಿ.ಮೀ. ಗೆ ರೂ. 1.10 ಕೋಟಿಗೆ ಇಲಾಖೆಯು ಅನುಮತಿಯನ್ನು ಕೇಳಿತ್ತು. ತದನಂತರ ಇದು ರೂ. 75.00 ಲಕ್ಷಗಳಿಗೆ ಇಳಿಸಿದರು. ಈಗ ಅದು ರೂ. 50.00 ಲಕ್ಷಕ್ಕೆ ಬಂದಿದೆ. ರೂ. 50.00 ಲಕ್ಷಗಳ ವೆಚ್ಚದಲ್ಲಿ ಯಾವುದೇ ಕಾರಣಕ್ಕೂ ಯಾರೇ ತಾಂತ್ರಿಕ ಪರಿಣಿತರಾಗಲಿ ಅಥವಾ ಅಷ್ಟೇ ಏಕೆ ಆ ಬ್ರಹ್ಮ ಬಂದರೂ ಕೂಡಾ ಗುಣಮಟ್ಟದ ರಸ್ತೆಯನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಸರ್ಕಾರ ಇದರ ಬಗ್ಗೆ ಗಮನ ಹರಿಸಲಿ. ಗುಣಮಟ್ಟದ ರಸ್ತೆಗೆ ಆದ್ಯತೆ ಮೇರೆಗೆ ಗಮನ ಹರಿಸದೇ ಹೋದರೆ ಸಾರ್ವಜನಿಕರ ಹಣ ಪೋಲಾಗುತ್ತದೆ. ಇದನ್ನು ಮನಗಂಡು ಇಲಾಖೆಯವರು ಅರ್ಥಪೂರ್ಣವಾದ ರಸ್ತೆಗಳನ್ನು ಮಾಡಿಕೊಡಲಿ ಎಂಬ ಬೇಡಿಕೆಯನ್ನು ಇಡುತ್ತಿದ್ದೇನೆ.

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು): ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಬಾಲಕೃಷ್ಣರವರು ಕೇಳಿದಂಥ ಪ್ರಶ್ನೆಗೆ ಉತ್ತರವಾಗಿ, ಎರಡನೇ ಹಂತದಲ್ಲಿ ತೆಗೆದುಕೊಳ್ಳಬೇಕಾದ ಸಂದರ್ಭದಲ್ಲಿ ಗಮನದಲ್ಲಿಟ್ಟುಕೊಂಡು ಆ ರಸ್ತೆಯನ್ನು ಕೆ-ಶಿಪ್ ಮುಖಾಂತರ ನಿರ್ವಹಿಸುವ ಕೆಲಸ ಮಾಡುತ್ತೇನೆ. ಇನ್ನು ಶ್ರೀ ರಾಜುರವರಿಗೆ ಹೇಳಬೇಕಾದ ವಿಚಾರದಲ್ಲಿ ವಾಹನ ದಟ್ಟಣೆ ಹೆಚ್ಚಿರುವಂಥ ಸಂದರ್ಭದಲ್ಲಿ ರಸ್ತೆಯನ್ನು ಮೂರು ಮುಕ್ಕಾಲು

ಮೀಟರ್ ನಿಂದ ಐದೂವರೆ ಮೀಟರ್ ವರೆಗೆ ಮಾಡಬೇಕು ಎನ್ನುವಂಥ ಬೇಡಿಕೆಯನ್ನು ಇಟ್ಟಿದ್ದಾರೆ. ಈ ಬೇಡಿಕೆಗಳನ್ನು ಸಹ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇನೆ. ಇದರ ಜೊತೆಗೆ ಪ್ರಮುಖವಾದ ರಸ್ತೆಗಳಿಗೆ ರೂ. 50.00 ಲಕ್ಷ ಅಥವಾ ರೂ. 60.00 ಲಕ್ಷ ಸಾಕಾಗುವುದಿಲ್ಲ ಎನ್ನುವಂಥ ಬೇಡಿಕೆಯನ್ನು ಮತ್ತೊಬ್ಬ ಶಾಸಕರು ಕೇಳಿದ್ದಾರೆ. ಆದರೆ, ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ವಿವಿಧ ಭಿನ್ನ ಭಾಗಗಳಲ್ಲಿ ಇರುವಂಥ ವ್ಯವಸ್ಥೆಯನ್ನು ಗಮನದಲ್ಲಿಟ್ಟುಕೊಂಡು ರೂ. 40.00 ಲಕ್ಷಗಳಿಂದ ರೂ. 65.00 ಲಕ್ಷಗಳ ವೆಚ್ಚದಲ್ಲಿ 1 ಕಿ.ಮೀ. ವರೆಗೆ ಹಣ ಖರ್ಚು ಮಾಡಿ ರಸ್ತೆಗಳ ಅಭಿವೃದ್ಧಿ ಮಾಡಬೇಕಾದಂಥ ಕೆಲಸವನ್ನು ನಾವೀಗ ಮಾಡಲು ಪ್ರಾರಂಭ ಮಾಡುತ್ತಿದ್ದೇವೆ. 15.000 ಕಿ.ಮೀ. ರಸ್ತೆಯನ್ನು ತೆಗೆದುಕೊಂಡು ಮಾಡುವಂಥ ಕೆಲಸದ ಬಗ್ಗೆ ಯೋಜನೆ ಮಾಡಿದ್ದು, ಮೊದಲನೇ ಹಂತವಾಗಿ 7,000 ಕಿ.ಮೀ. ರಸ್ತೆಗಳನ್ನು ಮಾಡುವುದಕ್ಕೆ ಈಗಾಗಲೇ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಕೆಲವೇ ದಿವಸಗಳಲಿ ಟೆಂಡರ್ ಕರೆದು ಆ ಕೆಲಸವನ್ನು ಸಹ ಮಾಡುತ್ತೇವೆ. ತುರುವೇಕರೆ ಕ್ಷೇತ್ರದ ಶಾಸಕರು ಮತ್ತು ಶ್ರೀ ರುದ್ರೇಶ್ ಗೌಡರವರು ಹೇಳಿದಂತೆ ಶೇಕಡಾ 40 ರಷ್ಟು ರಾಜ್ಯಾದ್ಯಂತ ರಸ್ತೆಗಳ ಗುಂಡಿ ಮುಚ್ಚುವಂಥ ಕೆಲಸ ಆಗಿದೆ. ಮುಂದಿನ ಕೆಲಸವನ್ನು ಸಹ ಶೀಘ್ರದಲ್ಲೇ ಮಾಡುತ್ತಿದ್ದೇವೆ. ಡಿಸೆಂಬರ್ ಕೊನೆಯೊಳಗಾಗಿ ಅಥವಾ ಜನವರಿ 15 ರೊಳಗಾಗಿ ಸಂಪೂರ್ಣವಾಗಿ ರಾಜ್ಯಾದ್ಯಂತ Major district roads & state highway ಗಳ ಗುಂಡಿಗಳನ್ನು ಮುಚ್ಚುವಂಥ ವ್ಯವಸ್ಥೆಯನ್ನು ಮಾಡುತ್ತೇವೆ.

ತೆಂಗು ವಿಮಾ ಯೋಜನೆಯ ವಿವರ

ಶ್ರೀ ವಸಂತ ಬಂಗೇರ ಕೆ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–

ಶ್ರೀ (ಗಿಲ) ಮಾನ್ಯ ತೋಟಗಾರಿಕೆ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ತೋಟಗಾರಿಕೆ ಇಲಾಖೆ ಹಾಗೂ ತೆಂಗು ಅಭಿವೃದ್ಧಿ ಮಂಡಳಿಯ ಜಂಟಿಯಾಗಿ ನಿರ್ವಹಿಸುವ "ತೆಂಗು ವಿಮಾ ಯೋಜನೆ" ಯಡಿ ರಾಜ್ಯದಲ್ಲಿ ಎಷ್ಟು ತೆಂಗಿನ ಮರಗಳಿಗೆ ರೈತರು ವಿಮೆ ಮಾಡಿಸಿರುತ್ತಾರೆ; (ಜಿಲ್ಲಾವಾರು ವಿವರ ನೀಡುವುದು;

(ಆ) ವಿಮಾ ಅವಧಿಯನ್ನು ವಾರ್ಷಿಕವಾಗಿ ನಿಗದಿಪಡಿಸಿರುವುದರಿಂದ ರೈತರು ತೆಂಗಿನ ಮರಗಳಿಗೆ ವಿಮೆ ಮಾಡಲು ಹಿಂದೇಟು ಹಾಕಿರುವುದು/ಆಸಕ್ತಿ ವಹಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;